**ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ ಪೊನ್ನಂಪೇಟೆ**

**ಸಿ.ಸಿ.ಸಂಖ್ಯೆ.456/2024**

ಫಿರ್ಯಾದುದಾರು : ಶ್ರೀಮತಿ ಮಾಚಮಾಡ ಪಾರ್ವತಿ,
ಗಂಡ: ಎಮ್.ಅನೀಶ್ ಮಾದಪ್ಪ,
ಎಮ್.ಸಿ.ಮಾದಪ್ಪ ಪೆಟ್ರೋಲಿಯಂ,
ಹರಿಶ್ಚಂದ್ರಪುರ, ಮುಖ್ಯ ರಸ್ತೆ,
ಗೋಣಿಕೊಪ್ಪ, ಪೊನ್ನಂಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ.

ಪ್ರತಿನಿಧಿಸುವವರು,
ಶ್ರೀ ಎ.ಅನೀಶ್ ಮಾದಪ್ಪ,
ತಂದೆ: ಎಮ್.ಸಿ.ಮಾದಪ್ಪ,
ಪ್ರಾಯ: 53 ವರ್ಷ,
ವಾಸ: ತಾವಳಗೇರಿ ಗ್ರಾಮ,
ಟಿ.ಶೆಟ್ಟಿಗೇರಿ ಅಂಚೆ, ಹುದಿಕೇರಿ,
ಪೊನ್ನಂಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.

**---ವಿರುದ್ಧ –**

ಆರೋಪಿ : ಶ್ರೀ ಚಮೇರ ಲಕ್ಷ್ಮಣ ದಿನೇಶ್,
ವಾಸ: ನಂ.380, ಕಾವೇರಿ ನಿಲಯ,
ಮೊದಲನೇ ಮಹಡಿ, 2ನೇ ಫೇಸ್,
4ನೇ ಹಂತ, ವಿಜಯನಗರ,
ಮೈಸೂರು - 570 032.

**ಆರೋಪಿಯಾದ ನಿಮ್ಮ ವಿರುದ್ಧ ಇರುವ ಆಪಾದನೆ ಏನೆಂದರೆ**

ಆರೋಪಿಯಾದ ನೀವು ಪಿರ್ಯಾದಿದಾರರಾದ ಶ್ರೀಮತಿ ಮಾಚಮಾಡ ಪಾರ್ವತಿ, ರವರಿಗೆ ಪರಿಚಯರಸ್ಥರಾಗಿದ್ದು, ನೀವು ಪಿರ್ಯಾದುದಾರರಿಂದ ಸೈಟ್ ಖರೀದಿಸಲು ರೂ.6,80,000/- ಹಣವನ್ನು ಕೈ ಸಾಲವಾಗಿ ಪಡೆದುಕೊಂಡಿದ್ದು, ಪಿರ್ಯಾದಿಯವರು ಸಾಲದ ಹಣವನ್ನು ಹಿಂತಿರುಗಿಸುವಂತೆ ಕೇಳಿದಾಗ, ಆರೋಪಿಯಾದ ನೀವು ದಿ:18.01.2024ರ ರೂ.6,80,000/- ರೂಪಾಯಿಗಳಿಗೆ ನಿಮ್ಮ ಕೆನರ ಬ್ಯಾಂಕ್, ಎಲವಾಲ ಶಾಖೆಯ 592343 ನಂಬರಿನ ಚೆಕ್ಕನ್ನು ನೀಡಿದ್ದು, ನಂತರ ಪಿರ್ಯಾದಿದಾರರು ಸದರಿ ಚೆಕ್ ಅನ್ನು ನಗದೀಕರಣಕ್ಕಾಗಿ ತಮ್ಮ ಬ್ಯಾಂಕ್ ಆದ ಹೆಚ್.ಡಿ.ಎಫ್.ಸಿ ಬ್ಯಾಂಕ್ ಗೆ ಹಾಜರುಪಡಿಸಿದಾಗ ಸದರಿ ಬ್ಯಾಂಕ್‌ನವರು "Funds Insufficient" ಎಂಬ ಹಿಂಬರಹ ನೀಡಿರುತ್ತಾರೆ. ನಂತರ ಪಿರ್ಯಾದಿದಾರರು ತಮ್ಮ ವಕೀಲರ ಮೂಖಾಂತರ 15 ದಿನಗಳೊಳಗೆ ಚೆಕ್ ಹಣವನ್ನು ಹಿಂದಿರುಗಿಸುವಂತೆ ದಿ: 12.02.2024 ರಂದು ಕಾನೂನು ರೀತಿಯ ನೋಟಿಸನ್ನು ನೀಡಿದ್ದರು ಸಹ ನೀವು ಚೆಕ್ ಮೊತ್ತವನ್ನು ನಿಗದಿತ ಸಮಯದಲ್ಲಿ ಪಿರ್ಯಾದಿದಾರರಿಗೆ

ಕೊಡದೇ ಮೋಸ ಮಾಡಿದ್ದು, ಇದು ವ್ಯವಹರಣೆಯ ಲಿಖಿತಗಳ ಅಧಿನಿಯಮ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವಾಗಿದ್ದು, ಈ ನ್ಯಾಯಾಲಯದ ವಿಚಾರಣಾಧಿಕಾರ ವ್ಯಾಪ್ತಿಯಲ್ಲಿ ಮಾಡಿರುವುದಾಗಿ ಆರೋಪಿಸಲಾಗಿದೆ.

**ಆರೋಪಿಯ ಹೇಳಿಕೆ**

1. ಪ್ರಶ್ನೆ - ಇದೀಗ ಓದಿ ಹೇಳಿದ ಆರೋಪಣೆಯು ನಿಮಗೆ ಅರ್ಥವಾಯಿತೆ ?

ಉತ್ತರಃ ಅರ್ಥವಾಯಿತು.

2. ಪ್ರಶ್ನೆ - ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಬಯಸುವಿರಾ?

ಉತ್ತರಃ ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು.

(ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ದಿ.13.08.2026 ರಂದು ಆರೋಪಿಗೆ ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ).

13.8.16.

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಪೊನ್ನಂಪೇಟೆ,